ಶಿಕ್ಷಕರ ಮತ್ತು ಪೋಷಕರ ಅಂಕಣ

# ಉಪಾಧ್ಯಾಯರಿಗಾಗಿ ಮಾರ್ಗದರ್ಶಿ ಸೂತ್ರಗಳು

ಸ್ವಾಮಿ ನಿತ್ಯಸ್ಥಾನಂದ

## ಶಿಕ್ಷಣವನ್ನು ಕುರಿತು ವಿವೇಕಾನಂದರು

ಹಿಂದೂ ಸಂಸ್ಕೃತಿಯಲ್ಲಿರುವ ಒಂದು ವೈಶಿಷ್ಟ್ಯವೆಂದರೆ ಅಲ್ಲಿ ಪ್ರತಿಯೊಂದು ವಿಷಯಕ್ಕೂ ಧರ್ಮವೇ ಕೇಂದ್ರವಾಗಿರುವುದು. ಸಾಹಿತ್ಯ, ಸಂಗೀತ, ಚಿತ್ರಕಲೆ, ಹೀಗೆ ಯಾವುದೇ ಕ್ಷೇತ್ರವನ್ನು ತೆಗೆದುಕೊಳ್ಳಿ, ಅವೆಲ್ಲ ಧರ್ಮವನ್ನೇ ಕೇಂದ್ರವನ್ನಾಗಿಟ್ಟುಕೊಂಡಿವೆ. ಹಾಗೆಯೇ ವಿವಿಧ ಮನರಂಜನಾ ಕಾರ್ಯಕ್ರಮಗಳೂ ಕೂಡ ಧರ್ಮದ ಸುತ್ತ ಹೆಣೆಯಲ್ಪಟ್ಟಿವೆ. ಯಕ್ಷಗಾನ, ನಾಟಕ, ನೃತ್ಯ ಇವುಗಳಲ್ಲೆಲ್ಲ ಧಾರ್ಮಿಕ ವಿಷಯವೇ ಪ್ರಧಾನ. ಧಾರ್ಮಿಕ – ಆಧ್ಯಾತ್ಮಿಕ ಪ್ರಜ್ಞೆಯನ್ನು ಜನರಲ್ಲಿ ಉಳಿಸಿಕೊಂಡು ಬರಬೇಕು ಎಂಬ ದೃಷ್ಟಿಯಿಂದ ಹಿಂದಿನವರು ಈ ಒಂದು ಸಂಪ್ರದಾಯವನ್ನು ಮಾಡಿರುವರು. ಹೀಗೆಯೇ ಶಿಕ್ಷಣದ ಹಿನ್ನೆಲೆಯೂ ಧರ್ಮವಾಗಿರಬೇಕು. ಆದ್ದರಿಂದ ಸ್ವಾಮಿ ವಿವೇಕಾನಂದರು, "ವಿದ್ಯಾಭ್ಯಾಸವೆಂದರೆ ನಮ್ಮೊಳಗೆ ಆಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತಿ" ಎಂದು ಶಿಕ್ಷಣದ ನಿರ್ವಚನ ನೀಡುತ್ತಾರೆ. ಈ ಪರಿಪೂರ್ಣತೆಯ ಅಭಿವ್ಯಕ್ತಿಗೆ ತಡೆಯನ್ನುಂಟುಮಾಡುವುದು ದ್ವೇಷ, ಅಸೂಯೆ, ಅಹಂಕಾರ ಇತ್ಯಾದಿಗಳು. ಸೂರ್ಯನನ್ನು ಮೋಡ ಆವರಿಸುವಂತೆ ಇವು ನಮ್ಮ ಆತ್ಮವನ್ನು ಆವರಿಸುವುವು. ಇವನ್ನು ತೆಗೆದಾಗ ಆತ್ಮದ ಪರಿಪೂರ್ಣತೆ ಮತ್ತು ಸೌಂದರ್ಯ ಅಭಿವ್ಯಕ್ತವಾಗುವುವು. ಇದೇ ನಿಜವಾದ ಶಿಕ್ಷಣದ ಗುರಿ. ನಮ್ಮನ್ನು ಪರಿಪೂರ್ಣ ವ್ಯಕ್ತಿಯನ್ನಾಗಿ ಮಾಡುವುದು ಶಿಕ್ಷಣದ ಗುರಿ. ನೈತಿಕವಾಗಿ, ವೈಚಾರಿಕವಾಗಿ, ಕೆಲಸಕಾರ್ಯಗಳಲ್ಲಿ, ಓದುವುದರಲ್ಲಿ – ಹೀಗೆ ಪ್ರತಿಯೊಂದರಲ್ಲೂ ನಾವು ಪರಿಪೂರ್ಣರಾಗಿರಬೇಕು. ದೈಹಿಕ, ಮಾನಸಿಕ, ಆಧ್ಯಾತ್ಮಿಕ ಪರಿಪೂರ್ಣತೆ ಶಿಕ್ಷಣದ ಗುರಿ, ಅಂದರೆ ಪೂರ್ಣ ವ್ಯಕ್ತಿತ್ವದ ವಿಕಾಸವಾಗಬೇಕು.

ಸ್ವಾಮಿ ವಿವೇಕಾನಂದರ ಪ್ರಕಾರ ಕೇವಲ ವಿಷಯ ಸಂಗ್ರಹ ಶಿಕ್ಷಣದ ಗುರಿಯಲ್ಲ. ಅದೇ ಶಿಕ್ಷಣದ ಗುರಿಯಾಗಿದ್ದಿದ್ದರೆ ಪುಸ್ತಕ ಭಂಡಾರವನ್ನೇ ಒಬ್ಬ ವಿದ್ಯಾವಂತ ಎನ್ನಬಹುದಿತ್ತು. ಒಂದೊಂದು ಪುಸ್ತಕದಲ್ಲೂ ಎಷ್ಟೊಂದು ವಿಷಯಸಂಗ್ರಹವಿರುತ್ತದೆ! ಆದರೆ ಪುಸ್ತಕ ಕೇವಲ ಪುಸ್ತಕವೇ. ಬರಿಯ ವಿಷಯಸಂಗ್ರಹದಿಂದ ನಾವೂ ಒಂದು ಚಲಿಸುವ ವಿಶ್ವಕೋಶ ಆಗುತ್ತೇವೆ ಅಷ್ಟೇ. ಮಾಹಿತಿ ಸಂಗ್ರಹ ಶಿಕ್ಷಣವಲ್ಲ. ಅತಿಯಾದ ಮಾಹಿತಿಸಂಗ್ರಹದಿಂದ ವಿಚಾರಶಕ್ತಿಯನ್ನೂ ಕಳೆದುಕೊಳ್ಳುತ್ತೇವೆ, ಜ್ಞಾನಾಭಿರುಚಿಯೂ ಹೊರಟುಹೋಗುತ್ತದೆ ಎಂದು ಪ್ರಾಜ್ಞರು ಹೇಳುತ್ತಾರೆ. ಈ ವಿಷಯದಲ್ಲಿ ವಿವೇಕಾನಂದರ ವಾಣಿಯನ್ನು ಕೇಳೋಣ:

> "ವಿದ್ಯಾಭ್ಯಾಸವೆಂದರೆ ನಿಮ್ಮ ತಲೆಗೆ ತುಂಬಿದ ವಿಷಯಗಳ ಮೊತ್ತವಲ್ಲ. ಅದು ಅಲ್ಲಿ ಜೀರ್ಣವಾಗದೆ ಬೆಲ್ಲಾಪಿಲ್ಲಿಯಾಗಿ ಬಿದ್ದಿರುತ್ತದೆ. . . .ನೀವೂ ಐದು ವಿಷಯಗಳನ್ನು ತಿಳಿದು, ಅವನ್ನು ನಿಮ್ಮ ಜೀವನದಲ್ಲಿ, ಶೀಲದಲ್ಲಿ ಅನುಷ್ಠಾನಕ್ಕೆ ತಂದರೆ ಇಡಿಯ ಪುಸ್ತಕಭಂಡಾರವನ್ನೇ ಕಂಠಪಾಠಮಾಡಿದವನಿಗಿಂತ ಹೆಚ್ಚು ವಿದ್ಯೆ ನಿಮಗೆ ಇದೆ. **"ಯಥಾ ಖರಶ್ಚಂದನಭಾರವಾಹೀ ಭಾರಸ್ಯ ವೇತ್ತಾ ನ ತು ಚಂದನಸ್ಯ"** – ಗಂಧದ ಮರವನ್ನು ಹೊರುವ ಕತ್ತೆಗೆ ಅದರ ಭಾರ ಮೊತ್ತ ಗೊತ್ತು, ಅದರ ಗುಣ ಗೊತ್ತಿರುವುದಿಲ್ಲ." (ಕೃತಿಶ್ರೇಣಿ, ೩.೧೭೩-೧೭೪)

ನಾವು ತಿಂದ ಆಹಾರವನ್ನು ಸರಿಯಾಗಿ ಅರಗಿಸಿಕೊಂಡಾಗ ಅದು ನಮಗೆ ದೈಹಿಕ ಶಕ್ತಿಯನ್ನು ಪೌಷ್ಟಿಕತೆಯನ್ನು ನೀಡುತ್ತದೆ. ಆಹಾರ ಸರಿಯಾಗಿ ಜೀರ್ಣವಾಗದೆ ಇದ್ದರೆ ಅಜೀರ್ಣದಿಂದ ಅನೇಕ ರೋಗಗಳು ಉಂಟಾಗುತ್ತವೆ. ಹಾಗೆಯೇ ಸರಿಯಾಗಿ ಅರಗಿಸಿಕೊಳ್ಳದ ಮಾಹಿತಿಗಳೂ ಬೌದ್ಧಿಕ ಅಜೀರ್ಣರೋಗಕ್ಕೆ ಕಾರಣವಾಗುತ್ತದೆ ಎಂದು ಸ್ವಾಮಿ ವಿವೇಕಾನಂದರು ಹೇಳುತ್ತಾರೆ. ಕಣ್ಣುಮುಚ್ಚಿಕೊಂಡು ಸಿಕ್ಕಿದ ಮಾಹಿತಿಗಳನ್ನೆಲ್ಲ ನುಂಗುವುದಲ್ಲ. ನಾವು ವಿಚಾರದ ಮೂಲಕ ಪಡೆದ ಜ್ಞಾನವನ್ನು ಮೆಲುಕು ಹಾಕಬೇಕು. ಅದು ನಮ್ಮ ವ್ಯಕ್ತಿತ್ವದೊಡನೆ ಒಂದಾಗಬೇಕು, ನಮ್ಮ ನಡೆನುಡಿಗಳಲ್ಲಿ ಪ್ರತಿಫಲಿಸಬೇಕು. ಆಗ ನಮ್ಮ ಇಡೀ ವ್ಯಕ್ತಿತ್ವ ಆರೋಗ್ಯವಂತವಾಗುತ್ತದೆ. ಜ್ಞಾನವನ್ನು ಸರಿಯಾಗಿ ಅರಗಿಸಿಕೊಳ್ಳಬೇಕಾದರೆ ನಾವು ವಿಚಾರಪರರಾಗಬೇಕು, ಪ್ರಶ್ನಿಸುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಇದರಿಂದ ಪಡೆದ ಜ್ಞಾನವು ಸರಿಯಾಗಿ ಮಥಿಸಲ್ಪಟ್ಟು ಅದು ನಮ್ಮ ವ್ಯಕ್ತಿತ್ವ ವ್ಯವಸ್ಥೆಯೊಂದಿಗೆ ಒಂದಾಗುತ್ತದೆ. ಆಗ ಮನಶ್ಶಕ್ತಿ ವೃದ್ಧಿಯಾಗುತ್ತದೆ. ದೇಹಕ್ಕೆ ಆಹಾರ ಮತ್ತು ವ್ಯಾಯಾಮ ಎರಡೂ ಬೇಕಾಗಿರುವಂತೆ ಮನಸ್ಸಿಗೂ ಬೆಳೆಯಲು ಜ್ಞಾನಾಹಾರ ಮತ್ತು ವೈಚಾರಿಕ ವ್ಯಾಯಾಮ ಎರಡೂ ಬೇಕು. ಶಿಕ್ಷಣ ಇವೆರಡನ್ನೂ ಒದಗಿಸಬೇಕು.

ಪರಿಪೂರ್ಣತೆ ನಮ್ಮೊಳಗೇ ಇದೆ, ನಾವು ಹೊರಗಡೆಯಿಂದ ಪಡೆಯಬೇಕಾಗಿಲ್ಲ ಎಂದು ವಿವೇಕಾನಂದರು ಹೇಳುತ್ತಾರೆ. ನಮ್ಮೊಳಗೆ ಪವಿತ್ರತೆ, ದಿವ್ಯತೆ, ಶಕ್ತಿ, ಪರಿಪೂರ್ಣತೆ ಎಲ್ಲ ಇವೆ. ಇವೆಲ್ಲ ನಮ್ಮ ಆತ್ಮದ ಗುಣಗಳು. ಈ ಆತ್ಮದ ವಿಕಾಸವೇ, ಅಂದರೆ ಈ ಎಲ್ಲ ಗುಣಗಳನ್ನು ಪ್ರಕಾಶಗೊಳಿಸುವುದೇ ಶಿಕ್ಷಣದ ಗುರಿ. ಆತ್ಮ ವಿಕಾಸಗೊಂಡಂತೆ ಎಲ್ಲ ಉನ್ನತ ಮೌಲ್ಯಗಳು ನಮ್ಮದಾಗುವುವು. ಸ್ವಾಮಿ ವಿವೇಕಾನಂದರು ಹೇಳುತ್ತಾರೆ: "ಸುಪ್ತಾತ್ಮವು ಜಾಗೃತವಾಗಿ ಕ್ರಿಯಾಶೀಲವಾದಾಗ ಶಕ್ತಿ, ಒಳ್ಳೆಯತನ, ವೈಭವಗಳು ಬರುತ್ತವೆ, ಉತ್ಕೃಷ್ಟವಾದುದೆಲ್ಲವೂ ಬರುತ್ತವೆ." ಈ ದೃಷ್ಟಿಯಿಂದ ನೋಡಿದಾಗ ಪ್ರೀತಿ, ಸಹಾನುಭೂತಿ, ದಯೆ, ಎಲ್ಲ ನೈತಿಕ ಸದ್ಗುಣಗಳು ಇವೇ ಮುಂತಾದ ಉನ್ನತ ಮೌಲ್ಯಗಳು ಅಧ್ಯಾತ್ಮ ಮೂಲದಿಂದ ಬರುತ್ತವೆ. ಇವುಗಳನ್ನು ನಾವು ಜಡ ಪ್ರಕೃತಿಯಿಂದ (Matter) ಪಡೆಯಲಾರೆವು. ಎಲ್ಲ ಸೂಕ್ಷ್ಮ ಭಾವಗಳು ಮತ್ತು ಸಂವೇದನೆಗಳು ಆತ್ಮಾಭಿವ್ಯಕ್ತಿಯ ಪರಿಣಾಮಗಳೇ ಆಗಿವೆ. ವಿದ್ಯುಚ್ಛಕ್ತಿ ನಮ್ಮ ಕಣ್ಣಿಗೆ ಕಾಣದೆ ಇರಬಹುದು. ಆದರೆ ಅದರ ಅಭಿವ್ಯಕ್ತಿಯನ್ನು ನಾವು ನೋಡುತ್ತೇವೆ. ಬಲ್ಬು ಮುಂತಾದವುಗಳಲ್ಲಿ ಅದು ಬೆಳಕಾಗಿ ವ್ಯಕ್ತವಾಗುತ್ತದೆ, ವಿದ್ಯುತ್ ಒಲೆಯಲ್ಲಿ ಶಾಖವಾಗಿ ವ್ಯಕ್ತವಾಗುತ್ತದೆ ಇತ್ಯಾದಿ. ಹಾಗೆಯೇ ಆತ್ಮ ಅಥವಾ ದಿವ್ಯತೆ ಅಥವಾ ಅಧ್ಯಾತ್ಮಸ್ವರೂಪ ಉನ್ನತ ಮೌಲ್ಯಗಳ ರೂಪದಲ್ಲಿ ವ್ಯಕ್ತವಾಗುತ್ತದೆ. ಶಿಕ್ಷಣವು ಈ ಮೌಲ್ಯಗಳ ಹೊರಹೊಮ್ಮುವಿಕೆಗೆ

---

ಮೈಸೂರು ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮೀಜಿಯವರು ಈ ಪತ್ರಿಕೆಯ ಪ್ರಥಮ ಸಂಪಾದಕರು, ಗಂಭೀರ ಚಿಂತಕರು, ಉತ್ತಮ ಲೇಖಕರು.

ಪೂರಕವಾಗಿರಬೇಕು. ಒಂದು ಹೂವು ಮೊಗ್ಗಾಗಿರುವಾಗ ಅದರ ಸುವಾಸನೆ, ಸೌಂದರ್ಯ ಯಾವುದೂ ತಿಳಿಯುವುದಿಲ್ಲ. ಅದು ಅರಳಿದಂತೆಲ್ಲ ಅದರ ಎಲ್ಲ ಗುಣಗಳೂ ಹೊರಬರುವುವು. ಹಾಗೆಯೇ ನಮ್ಮ ಅಂತರಾತ್ಮವು ಅರಳಿದಾಗ, ನಮ್ಮ ದಿವ್ಯತೆಯ ಪ್ರಜ್ಞೆ ನಮಗಾದಾಗ ಶಕ್ತಿ, ಸಾಮರ್ಥ್ಯ, ಪವಿತ್ರತೆ, ಪರಿಪೂರ್ಣತೆ ಎಲ್ಲ ಬರುವುವು. ಇದು ಶಿಕ್ಷಣದ ಒಂದು ಬಹುಮುಖ್ಯ ಗುರಿ. ಅದಕ್ಕಾಗಿಯೇ ಸ್ವಾಮೀಜಿ ಧರ್ಮವೇ ಶಿಕ್ಷಣದ ಕೇಂದ್ರಬಿಂದು ಎಂದರು – "I look upon religion as the inner most core of education ". ಇಲ್ಲಿ ಧರ್ಮ ಎಂದರೆ ಮತಾಚರಣೆಗಳಲ್ಲ – ಸಾಧನೆಗಳ ಮೂಲಕ ಆತ್ಮಪ್ರಕಾಶವನ್ನು ಹೊರಹೊಮ್ಮಿಸುವುದು.

ಆದ್ದರಿಂದ ಶಿಕ್ಷಣವೆಂದರೆ ಹೊರಗಿನಿಂದ ಏನನ್ನೂ ಪಡೆಯುವು ದಲ್ಲ. ಶಿಕ್ಷಕ ಮಗುವಿಗೆ ಏನನ್ನೂ ಹೊಸದಾಗಿ ಕಲಿಸುವುದಿಲ್ಲ. "ಮಗುವು ತನ್ನಲ್ಲಿ ಸುಪ್ತವಾಗಿರುವ ಸಾಮರ್ಥ್ಯಗಳನ್ನು ವ್ಯಕ್ತಪಡಿಸಲು ಸಹಾಯ ಮಾಡುವುದೇ ಶಿಕ್ಷಣ" ಎಂದು ಎರಿಕ್ ಫ್ರೊಮ್ ಎಂಬ ಪ್ರಸಿದ್ಧ ಮನಶ್ಶಾಸ್ತ್ರಜ್ಞರು ಹೇಳುತ್ತಾರೆ. ಇಲ್ಲಿ ಒಂದು ಬೀಜವಿದೆ. ಆ ಬೀಜದಲ್ಲಿ ಮರವಾಗಿ ಬೆಳೆಯುವ ಸಾಮರ್ಥ್ಯ ಆಗಲೇ ಇದೆ. ನಾವದನ್ನು ನೆಲದಲ್ಲಿ ಬಿತ್ತಿ ನೀರು ಗೊಬ್ಬರ ಹಾಕುತ್ತೇವೆ. ಬೇರೆ ಪ್ರಾಣಿಗಳು ಅದನ್ನು ತಿನ್ನದಿರಲೆಂದು ಒಂದು ಬೇಲಿ ಕಟ್ಟುತ್ತೇವೆ. ಬೀಜ ತಾನಾಗಿಯೇ ಬೆಳೆದು ಗಿಡವಾಗಿ ಮರವಾಗುತ್ತದೆ. ಅದು ಬೆಳೆಯುವುದಕ್ಕೆ ನಾವೊಂದು ಅವಕಾಶ ಕಲ್ಪಿಸಿ ಕೊಡುತ್ತೇವಷ್ಟೆ. ಈ ಸ್ಕೂಲು, ಕಾಲೇಜು, ವಿಶ್ವವಿದ್ಯಾಲಯ – ಇವುಗಳೆಲ್ಲ ಮಗು ಬೆಳೆಯುವುದಕ್ಕೆ – ಅಂದರೆ ತನ್ನೊಳಗಿನ ಶಕ್ತಿಯನ್ನು, ಪ್ರತಿಭೆಯನ್ನು, ಜ್ಞಾನವನ್ನು, ಪರಿಪೂರ್ಣತೆ ಯನ್ನು ಅಭಿವ್ಯಕ್ತಗೊಳಿಸುವುದಕ್ಕೆ ಕಲ್ಪಿಸಿರುವ ಅವಕಾಶಗಳು. ಗಿಡವನ್ನು ಸರಿಯಾಗಿ ಬೆಳೆಸಿದರೆ ಅದು ಆರೋಗ್ಯಕರವಾದ ಮರವಾಗಿ ಬೆಳೆದು ಉತ್ತಮ ಫಲವನ್ನು ನೀಡುವುದು. ಹಾಗೆಯೆ ಎಲ್ಲ ಶಿಕ್ಷಣ ಸಂಸ್ಥೆಗಳೂ ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ, ಉಪಾಧ್ಯಾಯರೆಲ್ಲ ನಿಷ್ಠೆಯಿಂದ ತಮ್ಮ ಕರ್ತವ್ಯವನ್ನು ಪಾಲಿಸಿದರೆ, ಮಗುವೂ ಉತ್ತಮ ಪ್ರಜೆಯಾಗಿ ಬೆಳೆದು, ಸಮಾಜಕ್ಕೆ ಒಳಿತನ್ನು ಉಂಟುಮಾಡುತ್ತದೆ.

ಕೈಗಾರಿಕಾ ಬೆಳವಣಿಗೆಯೇ ದೇಶದ ಮುಖ್ಯ ಗುರಿಯಾಗಿರು ವುದರಿಂದ ಶಿಕ್ಷಣವು ಇಂಜಿನಿಯರುಗಳು, ವಿಜ್ಞಾನಿಗಳು, ತಂತ್ರಜ್ಞರು, ವೈದ್ಯರು, ಗುಮಾಸ್ತರು ಇವರುಗಳನ್ನು ಉತ್ಪಾದಿಸುವುದರಲ್ಲಿಯೇ ನಿರತವಾಗಿದೆ, ಮನುಷ್ಯ ನಿರ್ಮಾಣದಲ್ಲಲ್ಲ. ವ್ಯಕ್ತಿಯ ಸರ್ವತೋಮುಖ ವಿಕಾಸವೇ ಶಿಕ್ಷಣದ ಗುರಿ ಎಂಬುದನ್ನು ಮರೆತೇಬಿಟ್ಟಂತಿದೆ. ಹೇಗಾದರೂ ಮಾಡಿ ಪರೀಕ್ಷೆಯಲ್ಲಿ ಪಾಸಾಗಿ, ಒಂದು ಡಿಗ್ರಿ ಪಡೆದು ಕೆಲಸ ಸಿಕ್ಕಿದರೆ ಸಾಕು (ಕೆಲಸವಿಲ್ಲದಿದ್ದರೂ ಪರವಾಗಿಲ್ಲ, ಸಂಬಳ ಸಿಕ್ಕಿದರೆ ಸಾಕು!) ಎಂದೇ ಎಲ್ಲರೂ ಯೋಚಿಸುವುದು. ಇಂದಿನ ಯುವಕರಲ್ಲಿ ಧನಾಸಕ್ತಿಯೇ ತೀವ್ರವಾಗಿದ್ದು, ಸೇವಾ ಮನೋಭಾವ ದಿಂದ ವಿಮುಖರಾಗಿರುವುದು ತುಂಬ ಶೋಚನೀಯ. ಎಲ್ಲ ವೃತ್ತಿಗಳಲ್ಲಿಯೂ ಧನಾರ್ಜನೆಯೇ ಪ್ರಧಾನವಾಗಿ ತಮ್ಮ ವೃತ್ತಿಗಳ ಮೂಲಕ ಸಮಾಜಕ್ಕೆ ಸೇವೆಯನ್ನು ಸಲ್ಲಿಸಬೇಕೆಂಬ ಪ್ರವೃತ್ತಿ ಸಂಪೂರ್ಣ ಕಾಣೆಯಾದಂತಿದೆ. ಎಲ್ಲರೂ ಮಾನವೀಯತೆಯಿಂದ ದೂರವಾಗು ತ್ತಿದ್ದಾರೆ. ಮಾನವೀಯತೆಯನ್ನು ಕಲಿಸದ ಶಿಕ್ಷಣ ವ್ಯಕ್ತಿಗೂ ಸಮಾಜಕ್ಕೂ ಹಾನಿಯನ್ನು ಉಂಟುಮಾಡುತ್ತದೆ. ವೃತ್ತಿಪರ ಶಿಕ್ಷಣ ವ್ಯಕ್ತಿಪರವೂ ಆಗದಿದ್ದರೆ ಅನೈತಿಕತೆಯ ಹೆಚ್ಚಳದಿಂದ ವೃತ್ತಿಯೂ ಸಾರ್ಥಕತೆಯನ್ನು ಪಡೆಯುವುದಿಲ್ಲ.

ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣವು ವ್ಯಕ್ತಿಯನ್ನು ಸ್ವಾವಲಂಬಿ ಯನ್ನಾಗಿ ಮಾಡಬೇಕು – ಅವನು ತನ್ನ ಕಾಲ ಮೇಲೆ ತಾನು ನಿಲ್ಲುವಂತಾಗಬೇಕು. ಬಿ.ಎ., ಎಂ.ಎ. ಪಾಸು ಮಾಡಿ ಆಫೀಸಿನಿಂದ ಆಫೀಸಿಗೆ ಅಲೆಯುವಂತಾಗಬಾರದು. ತನಗೆ ತಾನೇ ಉದ್ಯೋಗವನ್ನು ಸೃಷ್ಟಿಸಿಕೊಳ್ಳುವಂತಹ ಸಾಮರ್ಥ್ಯ ಅವನಿಗೆ ಶಿಕ್ಷಣದಿಂದ ದೊರೆಯ ಬೇಕು. ಇದಕ್ಕೆ ಬದಲು ಈಗ ಶಿಕ್ಷಣವು ವ್ಯಕ್ತಿಗಳನ್ನು ಸಾಂಪ್ರದಾಯಿಕ ವೃತ್ತಿಯಿಂದ ವಿಮುಖಗೊಳಿಸಿ ಅವರನ್ನು ಕುರ್ಚಿಬದ್ಧರನ್ನಾಗಿಸುತ್ತಿದೆ. ಅಸಂಖ್ಯ ಯುವಕರು ಸಾಂಪ್ರದಾಯಿಕ ಕೆಲಸವೂ ಇಲ್ಲದೆ, ಆಫೀಸ್ ಕೆಲಸವೂ ದೊರೆಯದೆ ಸೋಮಾರಿಗಳಾಗಿ ಅಲೆಯುವಂತಾಗಿದೆ. ಇಂದಿನ ಶಿಕ್ಷಣವು ಕೆಲಸಕ್ಕೆ ಬಾರದ ವ್ಯಕ್ತಿಗಳನ್ನು ನಿರ್ಮಾಣ ಮಾಡುತ್ತಿದೆ. ಇದರಿಂದ ಅವರು ಜೀವನದಲ್ಲಿ ನಿಃಸಾರ್ಥಕತೆಯನ್ನು, ಆಂತರಿಕ ಶೂನ್ಯತೆಯನ್ನು ಕಾಣುತ್ತಿದ್ದಾರೆ. ಅವರ ಜೀವನವೇ ಅವರಿಗೆ ಹೊರೆಯಾಗುತ್ತಿದೆ. ವ್ಯಕ್ತಿಯು ತನಗೆ ತಾನೇ ಹೊರೆಯಾದಾಗ ಅವನು ಸಮಾಜಕ್ಕೂ ಹೊರೆಯಾಗುತ್ತಾನೆ. ಇಂದು ಹೆಚ್ಚಿನವರು ಪಡೆಯುವ ಶಿಕ್ಷಣ ವೃತ್ತಿಗೂ ಸಂಬಂಧಿಸಿರುವುದಿಲ್ಲ, ವ್ಯಕ್ತಿಗೂ ಸಂಬಂಧಿಸಿರು ವುದಿಲ್ಲ. ಅಷ್ಟೊಂದು ಧನವ್ಯಯದಿಂದ ದೀರ್ಘಾವಧಿಯಲ್ಲಿ ಗಳಿಸಿದ ಶಿಕ್ಷಣ ವ್ಯರ್ಥವಾಗಿ ಹೋಗುತ್ತದೆ. ವ್ಯಕ್ತಿಯು ಭೌತಿಕವಾಗಿ ಮಾತ್ರವಲ್ಲದೆ ವೈಚಾರಿಕವಾಗಿಯೂ ಭಾವನಾತ್ಮಕವಾಗಿಯೂ ಪರಾವಲಂಬಿ ಯಾಗುತ್ತಾನೆ. (ಮುಂದುವರಿಯುತ್ತದೆ)

ಶಿಕ್ಷಣ ತೊಟ್ಟಿಲಿನಲ್ಲೇ ಆರಂಭವಾಗುತ್ತದೆ. ಅದು ನಮ್ಮ ನಡವಳಿಕೆ ಮತ್ತು ವ್ಯವಹಾರಗಳಲ್ಲಿ ಕಾಣಿಸಿಕೊಳ್ಳುತ್ತದೆ. ಒಬ್ಬ ವ್ಯಕ್ತಿ ಒಳ್ಳೆಯ ಶಿಕ್ಷಣ ಪಡೆದಿರುವನೋ ಇಲ್ಲವೋ ಎನ್ನುವುದು ಸುತ್ತಲಿನವರಿಗೆ ಗೊತ್ತಾಗುತ್ತದೆ.

ಆಲ್ಫಾನ್ಸೋ ಎನ್ನುವವನು ಸ್ಪೈನ್ ದೇಶದ ರಾಜ. ಅವನು ತನ್ನ ರಾಜ್ಯದಲ್ಲಿ ಗೂಢವಾಗಿ ಸಂಚರಿಸುತ್ತಿದ್ದನು. ಒಮ್ಮೆ ಒಂದು ಸಣ್ಣ ಹೋಟೆಲ್ ನಲ್ಲಿ ಉಳಿದುಕೊಂಡನು. ತನ್ನ ಕೊಠಡಿಯ ಸಹಾಯಕನನ್ನು ಒಂದು ಕ್ಷೌರದ ಕನ್ನಡಿಗಾಗಿ ಕೇಳಿಕೊಂಡನು. ಅದನ್ನು ಅವನಿಗೆ ಕೊಡುತ್ತ, ಆ ಸಹಾಯಕನು ಕೇಳಲೋ ಬೇಡವೋ ಎಂಬಂತೆ ಕೇಳಿದನು: " ಸ್ವಾಮಿ, ನೀವು ಸಾಮಾನ್ಯ ಪ್ರಯಾಣಿಕರಲ್ಲವೆಂಬುದಂತೂ ಸತ್ಯ." "ಅದನ್ನು ಹೇಗೆ ಹೇಳುತ್ತೀಯೆ?" ಎಂದು ಕೇಳಿದ ರಾಜ. "ಅದು ಹಾಗೆಯೇ ಗೊತ್ತಾಗುತ್ತದೆ. ಹೇಳಿ, ಸ್ವಾಮಿ, ನೀವು ರಾಜಧಾನಿಯಿಂದ ಬಂದವ ರಲ್ಲವೇ?" "ಹೌದು" ಎಂದ ರಾಜ. "... ನೀವು ರಾಜಮನೆತನಕ್ಕೆ ಸೇರಿದವರಿರಬೇಕು?" ಎಂದ ಸಹಾಯಕ. ರಾಜ ಹಾರಿಕೆಯ ಉತ್ತರ ಕೊಟ್ಟ, "ಹೌದು, ನಾನು ಅಲ್ಲಿ ಮಹಾರಾಜರ ಕೈಕೆಳಗೆ ಅನೇಕ ಕೆಲಸ ಗಳನ್ನು ಮಾಡುತ್ತೇನೆ." ಆಗ ಸಹಾಯಕ ನಕ್ಕು ಹೇಳಿದ, "ನನ್ನಂತೆಯೇ, ನೋಡಿ, ಈಗ ನಾನು ಮಹಾರಾಜರಿಗೆ ಕ್ಷೌರ ಮಾಡುತ್ತೇನೆ" ಎಂದ ಬುದ್ಧಿವಂತ ಸಹಾಯಕ.

ಅತಿಥಿಯ ನಡವಳಿಕೆಯಿಂದಲೇ ಅವನು 'ಮಹಾರಾಜ' ಎಂದು ಸಹಾಯಕ ಗುರುತಿಸಿದ್ದ!